ಕರ್ನಾಟಕ ಸರಕಾರ

ವಾರ್ತಾ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 27-12-2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಡಾ. ಕೆ.ವಿ. ಪುಟ್ಟಪ್ಪನವರ 111ನೇ ಜನ್ಮ ದಿನಾಚರಣೆ ಅಂಗವಾಗಿ 'ಕುವೆಂಪು ನಮನ" ಕಾರ್ಯಕ್ರಮ:<br><br>ಉದ್ಘಾಟನೆ:<br><br>ಡಾ. ದೊಡ್ಡರಂಗೇಗೌಡ, ಖ್ಯಾತ ಸಾಹಿತಿಗಳು<br><br>ಅಧ್ಯಕ್ಷತೆ:<br><br>ಶ್ರೀ ಬಿ.ಪಿ. ಮಂಜೇಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ. | **29-12-2014** ಸೋಮವಾರ ಬೆಳಿಗ್ಗೆ **11-00** ಗಂಟೆಗೆ | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನವನ, ಬೆಂಗಳೂರು. |
| 2. | ಕರ್ನಾಟಕ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ:<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.<br><br>ಮುಖ್ಯ ಅತಿಥಿಗಳು:<br><br>ಶ್ರೀ ಅನಂತಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು.<br><br>ಶ್ರೀ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು.<br><br>ಶ್ರೀಮತಿ ಶಾಂತಕುಮಾರಿ, ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ<br><br>ಶ್ರೀಮತಿ ಉಮಾಶ್ರೀ ಕನ್ನಡ ಮತ್ತು ಸಂಸ್ಕೃತಿ | **29-12-2014** ಸೋಮವಾರ ಸಂಜೆ **5-30** ಗಂಟೆಗೆ | ಸಂಸ ಬಯಲು ರಂಗಮಂದಿರ (ರವೀಂದ್ರ ಕಲಾಕ್ಷೇತ್ರ ಆವರಣ), ಬೆಂಗಳೂರು |

| | | | |
|---|---|---|---|
| | ಸಚಿವರು.<br><br>**ಅಧ್ಯಕ್ಷತೆ:**<br><br>ಶ್ರೀ ಆರ್. ವಿ. ದೇವರಾಜ್, ವಿಧಾನಸಭಾ ಸದಸ್ಯರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ<br><br>ವಿಶೇಷ ಆಹ್ವಾನಿತರು:<br><br>ಡಾ. ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.<br><br>ಶ್ರೀ ಕೆ.ಎ. ಸದಾನಂದ,<br><br>ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | | |

ನಿರ್ದೇಶಕರ ಪರವಾಗಿ

# ತುರ್ತು ಪತ್ರಿಕಾಗೋಷ್ಠಿಗೆ ಆಹ್ವಾನ

ಡಾ. ವಿಷ್ಣುವರ್ಧನ್ ಶಂಕುಸ್ಥಾಪನೆ ಕುರಿತಂತೆ ಕನ್ನಡ ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮತ್ತು ಶ್ರೀ ಅನಿರುದ್ಧ್ ವಿಷ್ಣುವರ್ಧನ್ ಅವರುಗಳು ಇಂದು (ದಿನಾಂಕ 27-12-2014) ಸಂಜೆ 5-00 ಗಂಟೆಗೆ ಬೆಂಗಳೂರು ಇನ್‌ಫೆಂಟ್ರ ರಸ್ತೆಯ ವಾರ್ತಾ ಸೌಧದಲ್ಲಿ ಪತ್ರಕರ್ತನ್ನು ಭೇಟಿ ಮಾಡುವರು

ದಯಮಾಡಿ ಪತ್ರಕರ್ತರು ಈ ಪತ್ರಿಕಾಗೋಷ್ಠಿಗೆ ಆಗಮಿಸುವಂತೆ ಕೋರಿದೆ.

– ನಿರ್ದೇಶಕರು

## ಪತ್ರಿಕಾ ಪ್ರಕಟಣೆ

## ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಸಂಸ್ಥೆಯು ಚನ್ನಪಟ್ಟಣದಲ್ಲಿ ಕೆ.ಎಸ್.ಐ.ಎಸ್.ಎಫ್ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಸಮಾರಂಭವನ್ನು

ಡಿಸೆಂಬರ್ 31 ರಂದು ಬೆಳಗ್ಗೆ 9-00 ಗಂಟೆಗೆ ಚನ್ನಪಟ್ಟಣದ ಕವಾಯತು ಮೈದಾನದಲ್ಲಿ ಹಮ್ಮಿಕೊಂಡಿದೆ.

ಸಮಾರಂಭದ ಮುಖ್ಯ ಅತಿಥಿಯಾಗಿ ಪೊಲೀಸ್ ಮಹಾ ನಿರ್ದೇಶಕರು (ತರಬೇತಿ) ಶ್ರೀ ಸುಶಾಂತ್ ಮಹಾಪಾತ್ರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು (ತರಬೇತಿ) ಶ್ರೀ ಮೊಹಮ್ಮದ್ ವಜೀರ್ ಅಹಮ್ಮದ್ ಅವರು ಪಾಲ್ಗೊಳ್ಳುವರು.

ಬಾಬು:ಜಿಪಿಆರ್.

## ಅಧಿಕ ಭಾರದ ಸಾಗಾಣಿಕೆ ನಿಯಂತ್ರಣಕ್ಕೆ ಸಾರಿಗೆ ಇಲಾಖೆ ಕ್ರಮ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಧಿಕ ಭಾರ ಹಾಕಿಕೊಂಡು ಸರಕು ಸಾಗಣೆ ವಾಹನಗಳು ಸಂಚರಿಸುತ್ತಿರುವುದರಿಂದ ರಸ್ತೆಗಳು ಹಾಳಾಗುತ್ತಿರುವುದಲ್ಲದೆ ರಸ್ತೆ ಸುಧಾರಣೆಗೆ ಹಾಗೂ ದುರಸ್ತಿಗೆ ತೊಂದರೆ ಉಂಟಾಗುತ್ತದೆ. ಅಲ್ಲದೆ, ಇತರೆ ವಾಹನಗಳ ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತದೆ. ರಸ್ತೆಗಳು ಹಾಳಾಗುವುದರಿಂದ ಅಪಘಾತಗಳ ಪ್ರಮಾಣವೂ ಹೆಚ್ಚಾಗುತ್ತಿದೆ. ಇದರಿಂದಾಗಿ ಸರಕು ಸಾಗಣೆ ವಾಹನಗಳಲ್ಲಿ ಅಧಿಕ ಭಾರ ಸಾಗಾಣೆಯನ್ನು ನಿಯಂತ್ರಿಸುವುದು ಅತ್ಯಗತ್ಯವಾಗಿದೆ.

ಮೋಟಾರು ವಾಹನ ಕಾಯ್ದೆ ನೋಂದಣಿ ಪುಸ್ತಕದಲ್ಲಿ ಗೊತ್ತುಪಡಿಸಿದ ಹೇರು ಬಾರವನ್ನು ಮಾತ್ರ ಸಾಗಿಸಲು ಅವಕಾಶವಿರುತ್ತದೆ. ನಿಗದಿಪಡಿಸಿದ ಸಾಮರ್ಥ್ಯಕ್ಕಿಂತ ಹೆಚ್ಚಿನ ತೂಕದ ಸರಕು ಸಾಗಿಸುವುದನ್ನು ತನಿಖಾ ಸಿಬ್ಬಂದಿಯವರು ಗಮನಿಸಿದಲ್ಲಿ ಕಾಯ್ದೆಯ ಪ್ರಕಾರ ಕ್ರಮ ಅನುಸರಿಸಿ ಹೆಚ್ಚು ಭಾರವನ್ನು ವಾಹನ ಚಾಲಕರ ಜವಾಬ್ದಾರಿಯಲ್ಲಿಯೇ ಸ್ಥಳದಲ್ಲೇ ಇಳಿಸಲು ವಾಹನ ಚಾಲಕರಿಗೆ ಸೂಚನೆ ನೀಡಲು ಮತ್ತು ಹೆಚ್ಚುವರಿ ಭಾರದ ಸರಕನ್ನು ಇಳಿಸಿದ ನಂತರವೇ ವಾಹನವು ನಿಗದಿತ ತೂಕ ಸರಕನ್ನು ಹೊಂದಿದೆ ಎಂದು ಖಾತರಿಪಡಿಸಿಕೊಂಡ ನಂತರವೇ ವಾಹನವನ್ನು ಮುಂದೆ ಸಂಚರಿಸಲು ಅವಕಾಶ ನೀಡಲಾಗುತ್ತಿದೆ. ಈ ದಿಸೆಯಲ್ಲಿ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 9-11-2005 ರಲ್ಲಿ ನೀಡಿದ ಆದೇಶದ ಮೇರೆಗೆ ಅಧಿಕ ಭಾರ ಸಾಗಾಣಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾರಿಗೆ ಇಲಾಖೆಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ.

ಅಲ್ಲದೆ, ವಾಹನ ಮಾಲೀಕರು ಅಧಿಕ ಭಾರವನ್ನು ಕೊಂಡೊಯ್ಯದೆ ಕಾನೂನು ಪ್ರಕಾರ ನಿಗದಿತ ಪ್ರಮಾಣದ ಸರಕನ್ನು ಮಾತ್ರ ಸಾಗಿಸಿದಲ್ಲಿ ಅಧಿಕ ಭಾರ ಸಾಗಣೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಇದರಿಂದಾಗಿ ರಸ್ತೆಗಳು ಹಾಳಾಗುವುದನ್ನು ತಪ್ಪಿಸಲು ಸಾಧ್ಯವಾಗುವುದಲ್ಲದೆ ಹೆದ್ದಾರಿಗಳಲ್ಲಿ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ.

ನಿಯಮಬಾಹಿರವಾಗಿ ಅಧಿಕ ಭಾರ ಸಾಗಣೆ ಮಾಡುವ ಮೂಲಕ ಎಸಗುವ ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆಯ ಅಪರಾಧಕ್ಕೆ ವಾಹನ ಮಾಲೀಕರು/ಚಾಲಕರು ಅಪರಾಧಿಗಳಾಗುವಂತೆ ವಾಹನಗಳಲ್ಲಿ ಅಧಿಕ ಭಾರ ಸಾಗಣೆ ಮಾಡಲು ಸರಕು ನೀಡುವ ವ್ಯಕ್ತಿಗಳು/ಸಂಸ್ಥೆಗಳೂ ಮತ್ತು ಆಧಿಕ ಭಾರವನ್ನು ಸ್ವೀಕರಿಸುವ/ಸಂಸ್ಥೆಗಳು ಸಹ ಕಾನೂನು ಕ್ರಮಕ್ಕೆ ಒಳಪಡಬೇಕಾಗುತ್ತದೆ. ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಸರಕು ಸಾಗಣೆ ವಾಹನಗಳಲ್ಲಿ ನಿಯಮಬಾಹಿರವಾಗಿ ಅಧಿಕ ಭಾರ ಸಾಗಣೆ ಮಾಡಿದ ಪ್ರಕರಣಗಳಲ್ಲಿ ವಾಹನ ಮಾಲೀಕರು/ಚಾಲಕರು ಕಾನೂನು ಕ್ರಮಕ್ಕೆ ಒಳಪಡುವುದಲ್ಲದೆ, ವಾಹನಗಳಲ್ಲಿ ಅಧಿಕ ಭಾರ ಸಾಗಾಣಿಕೆಗೆ ಅವಕಾಶ ನೀಡುವ ವ್ಯಕ್ತಿಗಳು/ಸಂಸ್ಥೆಗಳು ಮತ್ತು ಅಧಿಕ ಭಾರದ ಸರಕನ್ನು ಸ್ವೀಕರಿಸುವ ವ್ಯಕ್ತಿಗಳು/ಸಂಸ್ಥೆಗಳ ವಿರುದ್ದವೂ ಸಹ ಕಾನೂನಿನ ಕ್ರಮ ತೆಗೆದುಕೊಳ್ಳಲಾಗುವುದು. ಆದ್ದರಿಂದ, ಅಧಿಕ ಭಾರದ ಸರಕನ್ನು ಸಾಗಣೆ ಮಾಡಲು ಅವಕಾಶ ನೀಡದಂತೆ ಸಾರಿಗೆ ಇಲಾಖೆ ತಿಳಿಸಿದೆ.

ಬಾಬು:ಜಿಪಿಆರ್.

# "ಕುವೆಂಪು ನಮನ" ಕಾರ್ಯಕ್ರಮ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಡಿಸೆಂಬರ್ 29 ರಂದು ಬೆಳಿಗ್ಗೆ 11-00 ಗಂಟೆಗೆ ನಗರದ ಕಬ್ಬನ್ ಉದ್ಯಾನವನದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಭಾಂಗಣದಲ್ಲಿ ರಾಷ್ಟ್ರಕವಿ ಡಾ. ಕೆ.ವಿ. ಪುಟ್ಟಪ್ಪನವರ 111ನೇ ಜನ್ಮ ದಿನಾಚರಣೆ ಅಂಗವಾಗಿ "ಕುವೆಂಪು ನಮನ" ಕಾರ್ಯಕ್ರಮವನ್ನು ಏರ್ಪಡಿಸಿದೆ.

ಈ ಸಮಾರಂಭದ ಉದ್ಘಾಟನೆಯನ್ನು ಖ್ಯಾತ ಸಾಹಿತಿ ಡಾ. ದೊಡ್ಡರಂಗೇಗೌಡ ಅವರು ನಡೆಸಿಕೊಡುವರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಶ್ರೀ ಬಿ.ಪಿ. ಮಂಜೇಗೌಡ ಅವರು ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದ ಅಂಗವಾಗಿ ಸರ್ಕಾರಿ ನೌಕರರಿಂದ ಗೀತಗಾಯನ ಏರ್ಪಡಿಸಲಾಗಿದೆ.

ಬಾಬು:ಜಿಪಿಆರ್.

# 8.37 ಲಕ್ಷ ಬಿಪಿಎಲ್ ಪಡಿತರ ಚೀಟಿ ರದ್ದು

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿರುವ ಒಟ್ಟು 1,31,79,911 ಕುಟುಂಬಗಳ ಪೈಕಿ 1,03,42,532 ಕುಟುಂಬಗಳನ್ನು ಆದ್ಯತಾ (ಬಿಪಿಎಲ್) ಕುಟುಂಬಗಳೆಂದು ಪರಿಗಣಿಸಿ ಪ್ರತಿ ಕೆ.ಜಿ. ಗೆ ರೂ 1 ರಂತೆ ಪ್ರತಿ ತಿಂಗಳು ಗರಿಷ್ಠ 30 ಕೆಜಿಯ ಪಡಿತರ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. ಸ್ವಯಂಪ್ರೇರಿತವಾಗಿ ಮತ್ತು ದೂರಿನ ಆಧಾರದ ಮೇಲೆ ಈಗಾಗಲೇ 8,37,322 ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಪಡಿಸಿ ತಪ್ಪಿತಸ್ಥರ ಮೇಲೆ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ. ಎಲ್ಲಾ ಅರ್ಹ ಪಡಿತರ ಚೀಟಿದಾರರ ವಿವರಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವೆಬ್‌ಸೈಟ್ **www.ahara.kar.nic.in** ರಲ್ಲಿ ಈಗಾಗಲೇ ಪ್ರಕಟಿಸಲಾಗಿದೆ.

ಅಲ್ಲದೆ, ಸಾರ್ವಜನಿಕ ವಿತರಣಾ ಪದ್ದತಿಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಪಡಿತರ ಚೀಟಿಯ ಸಂಖ್ಯೆ, ಕುಟುಂಬ ಮುಖ್ಯಸ್ಥರ ಹೆಸರು, ವಿಳಾಸ ಹಾಗೂ ಕುಟುಂಬ ಸದಸ್ಯರ ಸಂಖ್ಯೆಯ ವಿವರಗಳನ್ನೊಳಗೊಂಡ ಅರ್ಹ ಪಡಿತರ ಚೀಟಿದಾರರ ಪಟ್ಟಿಯನ್ನು ಆಯಾ ನ್ಯಾಯಬೆಲೆ ಅಂಗಡಿಗಳ ಮುಂದೆ ಕಡ್ಡಾಯವಾಗಿ ಪ್ರಕಟಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

2015 ರ ಜಇಇನವರಿ ಮಾಹೆಯಿಂದಲೇ ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಮುಂದೆ ಅರ್ಹ ಪಡಿತರ ಚೀಟಿಗಳ ಪಟ್ಟಿಯನ್ನು ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರಕಟಿಸಬೇಕಾಗಿದ್ದು ಒಂದೊಮ್ಮೆ ಯಾವುದೇ ನ್ಯಾಯಬೆಲೆ ಅಂಗಡಿಯ ಮುಂದೆ ಈ ರೀತಿ ಪಟ್ಟಿ ಪ್ರಕಟಿಸದಿದ್ದರೆ ಸಂಬಂಧಪಟ್ಟ ಆಹಾರ ನಿರೀಕ್ಷಕರು/ಉಪ ನಿರ್ದೇಶಕರ ಕಚೇರಿಗೆ ಅಥವಾ ಆಯುಕ್ತಾಲಯದ ಉಚಿತ ಸಹಾಯವಾಣಿ ಸಂಖ್ಯೆ 1967 ಕ್ಕೆ ಕರೆಮಾಡಿ ಅಥವಾ ಲಿಖಿತವಾಗಿ ದೂರು ದಾಖಲಿಸಬಹುದಾಗಿದೆ.

ನಕಲಿ/ಅನರ್ಹ ವ್ಯಕ್ತಿಗಳು ಪಡಿತರ ಆಹಾರ ಪಡೆದು ರಾಜ್ಯದ ಬೊಕ್ಕಸದ ಮೇಲೆ ಹೊರೆಯಾಗುವುದನ್ನು ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ಪಡಿತರ ಚೀಟಿ ಪಟ್ಟಿಯಲ್ಲಿ ಹೆಸರಿರುವ ಕುಟುಂಬಗಳು ಮೃತರಾಗಿದ್ದಲ್ಲಿ, ವಿಳಾಸದಲ್ಲಿ ವಾಸಿಸದೆ ಇದ್ದಲ್ಲಿ, ತೋರಿಸಿರುವ ಸಂಖ್ಯೆಗಿಂತ ಕಡಿಮೆ ಸದಸ್ಯರಿದ್ದಲ್ಲಿ ಅಂತಹ ಎಲ್ಲಾ ಮಾಹಿತಿಯನ್ನು ಆಯುಕ್ತಾಲಯದ ಉಚಿತ ಸಹಾಯವಾಣಿ 1967 ಕ್ಕೆ ಅಥವಾ ಲಿಖಿತವಾಗಿ ಸಂಬಂಧಪಟ್ಟ ಆಹಾರ ನಿರೀಕ್ಷಕರು, ತಹಸೀಲ್ದಾರರು, ಆಹಾರ ಉಪ ನಿರ್ದೇಶಕರು ಆಹಾರ ಆಯುಕ್ತರಿಗೆ ಮಾಹಿತಿ ನೀಡಲು ಕೋರಲಾಗಿದೆ. ಮಾಹಿತಿದಾರರು ತಮ್ಮ ಹೆಸರನ್ನು ಗೋಪ್ಯವಾಗಿಡಲು ಇಚ್ಛಿಸಿದಲ್ಲಿ ಗೋಪ್ಯತೆಯನ್ನು ಕಾಪಾಡಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತ ಶ್ರೀ ಪಟ್ಟಣಶೆಟ್ಟಿ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ವಿಕಲಚೇತನರ ಬಸ್‌ಪಾಸ್ ನವೀಕರಣ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

2015ನೇ ಸಾಲಿಗೆ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ನವೀಕರಣ ಮಾಡಬೇಕಿರುತ್ತದೆ. ವಿಕಲಚೇತನ ಫಲಾನುಭವಿಗಳಿಗೆ ನವೀಕರಿಸಿಕೊಳ್ಳಲು ಆಗಬಹುದಾದ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಹಾಲಿ 2014ನೇ ಸಾಲಿನಲ್ಲಿ ವಿತರಿಸಿರುವ ವಿಕಲಚೇತನರ ಬಸ್ ಪಾಸ್‌ಗಳನ್ನು ದಿನಾಂಕ:28.02.2015ರವರೆಗೆ ಮಾನ್ಯ ಮಾಡಿ ದಿನಾಂಕ:28.02.2015 ರೊಳಗಾಗಿ ನವೀಕರಿಕೊಳ್ಳಲು ಅನುಮತಿಸಲಾಗಿದೆ.

ದಿನಾಂಕ:01.01.2015 ರಿಂದ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳ ನವೀಕರಣವನ್ನು ಪ್ರಾರಂಬಿಸಲಾಗುವುದು. ಈ ಸಂಬಂಧ ಹಾಲಿ 2014 ರ ಪಾಸು ಹೊಂದಿರುವ ಫಲಾನುಭವಿಗಳು ರೂ.780/-ನ್ನು ನಗದು ರೂಪದಲ್ಲಿ ಪಾವತಿಸಿ 2015ನೇ ಸಾಲಿಗೆ ಪಾಸನ್ನು ಈ ಕೆಳಗಿನ ಪಾಸು ವಿತರಣಾ ಕೌಂಟರ್‌ಗಳಲ್ಲಿ ದಿನಾಂಕ:28.02.2015 ರ ರೊಳಗಾಗಿ ನವೀಕರಿಸಿಕೊಳ್ಳಲಾಗಿದೆ.

| | |
|---|---|
| 1. ಕೆಂಪೇಗೌಡ ಬಸ್ ನಿಲ್ದಾಣ<br>2. ಶಾಂತಿನಗರ ಬಸ್ ನಿಲ್ದಾಣ<br>3. ಶಿವಾಜಿನಗರ ಬಸ್ ನಿಲ್ದಾಣ<br>4. ಜಯನಗರ ಟಿ.ಟಿ.ಎಂ.ಸಿ.<br>5. ಕೆ.ಆರ್ ಮಾರುಕಟ್ಟೆ ಬಸ್ ನಿಲ್ದಾಣ | 6. ಯಲಹಂಕ ಉಪನಗರ ಬಸ್ ನಿಲ್ದಾಣ<br>7. ವಿಜಯನಗರ ಟಿ.ಟಿ.ಎಂ.ಸಿ.<br>8. ವೈಟ್‌ಫೀಲ್ಡ್ ಟಿ.ಟಿ.ಎಂ.ಸಿ.<br>9. ಯಶವಂತಪುರ ಟಿ.ಟಿ.ಎಂ.ಸಿ.<br>10. ಬನಶಂಕರಿ ಟಿ.ಟಿ.ಎಂ.ಸಿ.<br>11. ದೊಮ್ಮಲೂರು ಟಿ.ಟಿ.ಎಂ.ಸಿ. |

ಬಾಬು:ಜಿಪಿಆರ್.

# ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚು ಒತ್ತು

## – ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ)

ರಾಜ್ಯದ ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು ಈ ಕ್ಷೇತ್ರಗಳ ಸಮಗ್ರ ಬೆಳವಣಿಗೆಗೆ ಪೂರಕವಾದ ಹಣಕಾಸು ನೆರವು ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಇಂದಿಲ್ಲಿ ತಿಳಿಸಿದರು.

ಅವರು ಇಂದು ಕೆಂಗೇರಿ ಬಳಿಯಿರುವ ಡಿ.ಜಿ.ಎಸ್. ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಐದು ದಿನಗಳ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ತೊಡಗಿಸಿಕೊಂಡಿರುವ ಸಂಘಟನೆಗಳಿಗೂ ಅಗತ್ಯ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಮೂಲಕ ಹೆಚ್ಚಿನ ಸಾಧನೆಗೆ ಉತ್ತಮ ವಾತಾವರಣವನ್ನು ನಿರ್ಮಿಸಲಾಗುತ್ತಿದೆ. ರಾಜ್ಯದ ಐಟಿ/ಬಿಟಿ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆಯನ್ನು ಮಾಡುತ್ತಿದೆ. ಮಕ್ಕಳೇ ದೇಶದ ಭವಿಷ್ಯವನ್ನು ನಿರ್ಧರಿಸಬಲ್ಲರು. ಈ ಸಮಾವೇಶದಲ್ಲಿ ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳು ಸಮಾವೇಶದ ಪ್ರಯೋಜನ ಪಡೆಯಬೇಕೆಂದು ಅವರು ಹೇಳಿದರು.

ಸಮಾರಂಭದಲ್ಲಿ ಭಾರತರತ್ನ ಪ್ರೊ. ಸಿ.ಎನ್.ಆರ್. ರಾವ್, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಹರ್ಷವರ್ಧನ್ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಶ್ರೀ ಎಸ್. ಆರ್. ಪಾಟೀಲ್, ಹಾಗೂ ಇತರ ಗಣ್ಯರು ಪಾಲ್ಗೊಂಡಿದ್ದರು.

ಬಾಬು:ಜಿಪಿಆರ್.